ಸಿಸಿ ನಂಃ 2226/2024

ಸಿ.ಡಬ್ಲೂ – 13

ಪಿ.ಡಬ್ಲೂ –6

**4 ನೇ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ರವರ ನ್ಯಾಯಾಲಯ**

**ಧಾರವಾಡ.**

ಸಾಕ್ಷಿದಾರರ ಹೆಸರು : ಡಾ.ಮಹಮ್ಮದ ತಾಹಿರ

ತಂದೆಯ ಹೆಸರು : ಮಹಮ್ಮದ ಇಸೂಪ ಸೊಲ್ಲಾಪುರ

ವಯಸ್ಸು : 58 ವರ್ಷ

ಉದ್ಯೋಗ : ವೈಧ್ಯರು

ವಾಸ ಸ್ಥಳ : ಧಾರವಾಡ .

ಸತ್ಯ ಪ್ರತಿಜ್ಞೆ ಮಾಡಿಸಲಾಯಿತು :02–02–2026

**ಮುಖ್ಯ ವಿಚಾರಣೆ : ಮಾನ್ಯ ಹಿಸಸಅ ರವರಿಂದ**

2018 ರಿಂದ ಇಲ್ಲಿಯವರೆಗೂ ಧಾರವಾಡ ಜಲ್ಲಾ ಆಸ್ಪತ್ರೆಯಲ್ಲಿ ವೈಧ್ಯರಾಗಿ ಕೆಲಸ ಮಾಡಿರುತ್ತೇನೆ. ದಿಃ 26–05–2024 ರಂದು 8.02 ಗಂಟೆಗೆ 1 ನೇ ಆರೋಪಿ ಅಪಘಾತದ ಹಿನ್ನಲೆಯಲ್ಲಿ ಚಿಕಿತ್ಸೆಗೆ ಬಂದಿದ್ದರು. ಸದರಿಯವರನ್ನು ಪರೀಕ್ಷೆ ಮಾಡಿದಾಗ ಹರಿತವಾದ ಗಾಯ ತಲೆಯ ಎಡಭಾಗದಲ್ಲಿ ಮತ್ತು ಬಲ ತೋಳಿನಲ್ಲಿ ನೋವು ಕಂಡುಬಂದಿರುತ್ತದೆ. ಸದರಿಯವರನ್ನು ಸಿಟಿ ಸ್ಕ್ಯಾನ ಮಾಡಿದಾಗ ಎಡಭಾಗದ ಬೆನ್ನಿನ ಕಡೆ ಮೂಳೆ ಮುರಿತ ಕಂಡುಬಂದಿರುತ್ತದೆ.

ಸಿಟಿ ಬ್ರೆನ ಮಾಡಿಸಿದಾಗ ಯಾವುದೇ ತೊಂದರೆ ಇರುವುದಿಲ್ಲ ಎಂದು ವರದಿ ಬಂದಿರುತ್ತದೆ. ನಂತರ ಅವರನ್ನು ಕಿಮ್ಸ ಆಸ್ಪತ್ರೆಗೆ ಕಳುಹಿಸಿಕೊಟ್ಟಿದ್ದು ಅಲ್ಲಿ ಸಿಟಿ ಸ್ಕ್ಯಾನ ಪರೀಕ್ಷೆ

ಸಿಸಿ ನಂಃ 2226/2024
ಸಿ.ಡಬ್ಲೂ – 13
ಪಿ.ಡಬ್ಲೂ –6

ಮಾಡಿದಾಗ ತಲೆಯ ಎಡಭಾಗದಲ್ಲಿ ರಕ್ತ ಹೆಪ್ಪು ಗಟ್ಟಿದೆ ಎಂದುವರದಿ ಬಂದಿರುತ್ತದೆ. ನಂತರ ಅವರು ಅಲ್ಟ್ರೊಸೌಂಡ ಮಾಡಿದಾಗ ಅವರ ಲಿವರ್ ಎನಲಾರ್ಜ ಆಗಿದೆ ಎಂದು ವರದಿ ಬಂದಿರುತ್ತದೆ. ಈ ಬಗ್ಗೆ ನಾನು ಗಾಯದ ಪ್ರಮಾಣ ಪತ್ರವನ್ನು ಕೊಟ್ಟಿರುತ್ತೇನೆ. ಅವುಗಳಲ್ಲಿ ಮೂರನೇ ಗಾಯ ಗಂಭೀರ ಸ್ವರೂಪದ ಗಾಯವಾಗಿದ್ದು ಉಳಿದ ಗಾಯ ಸಾದಾ ಸ್ವರೂಪದ ಗಾಯವಾಗಿರುತ್ತದೆ. ಸದರಿ ಗಾಯದ ಪ್ರಮಾಣ ಪತ್ರವನ್ನು ನಿಪಿ.11 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿಪಿ.11 (ಎ) ಎಂದು ಗುರುತಿಸಲಾಯಿತು.

**ಪಾಟೀಸವಾಲುಃ ಆರೋಪಿ ಪರ ವಕೀಲರಿಂದ**

ನಿಪಿ.11 ರಲ್ಲಿ ಗಾಯದ ಹಿನ್ನಲೆ ನಮೂದು ಮಾಡಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ,

**( ಆನಂದ ಎಸ್ ಕರಿಯಮ್ಮನವರ್)**
4 ನೇ ಹಿ ದಿ ನ್ಯಾ ಹಾಗೂ ಜೆಎಂಎಫ್‌ಸಿ,
ಧಾರವಾಡ.